# 2014–15 ನೇ ಸಾಲಿನ ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ (S-16) ಯೋಜನೆಯ ಅನುಷ್ಠಾನದ ಮಾರ್ಗಸೂಚಿಗಳು:–

**I. ಯೋಜನೆಯ ಹೆಸರು ಹಾಗೂ ಲೆಕ್ಕಶೀರ್ಷಿಕೆ:** ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ **[ಲೆ.ಶಿ: 2401–00–119–5–02]**

## II. ಯೋಜನೆಯ ಸಂಕ್ಷಿಪ್ತ ಪರಿಚಯ:

ತೋಟಗಾರಿಕೆ ಅಭಿವೃದ್ಧಿಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳನ್ನು 19.01 ಲಕ್ಷ ಹೆಕ್ಟೇರ್ ವಿಸ್ತೀರ್ಣದ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಅದರಲ್ಲಿ ತೋಟದ ಬೆಳೆಗಳನ್ನು ಶೇ. 43.17% ಪ್ರದೇಶದಲ್ಲಿ, ತರಕಾರಿ ಶೇ. 23.03% ಪ್ರದೇಶದಲ್ಲಿ, ಹಣ್ಣುಗಳು ಶೇ.18.61% ಪ್ರದೇಶದಲ್ಲಿ, ಇತರೆ ಬೆಳೆಗಳನ್ನು ಶೇ 15.20% ಪ್ರದೇಶದಲ್ಲಿ ಬೆಳೆಸಲಾಗುತ್ತಿದೆ. ತೋಟಗಾರಿಕೆ ಬೆಳೆಗಳ ಬೇಸಾಯದಲ್ಲಿ ಆಧುನೀಕರಣವಾದಂತೆ, ಕೀಟ ಮತ್ತು ರೋಗಗಳ ಬಾಧೆಯು ರಾಜ್ಯದಲ್ಲಿ ಹೆಚ್ಚುತ್ತಿದೆ. ಕೆಲವು ರೋಗ / ಕೀಟ ಬಾಧೆಯು ಅತಿ ಹೆಚ್ಚಾಗಿ ಕಂಡು ಬಂದು, ತೋಟಗಾರಿಕೆ ಉತ್ಪನ್ನದ ಮೇಲೆ ಪರಿಣಾಮವನ್ನು ಬೀರಿ ಇಳುವರಿಯು ಕುಂಠಿತವಾಗುತ್ತಿದೆ. ಈ ನಿಟ್ಟಿನಲ್ಲಿ ತೋಟಗಾರಿಕೆ ಬೆಳೆಗಳನ್ನು ಕೀಟ ಮತ್ತು ರೋಗಗಳಿಂದ ರಕ್ಷಿಸಿ, ಅಧಿಕ ಇಳುವರಿ ಪಡೆದು ನಿಯಂತ್ರಿಸಲು ತೋಟಗಾರಿಕೆ ಇಲಾಖಾವತಿಯಿಂದ ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

## III. ಯೋಜನೆಯ ಉದ್ದೇಶಗಳು:

1. ಇಲಾಖೆಯ ಪರೋಪಜೀವಿ ಉತ್ಪಾದನಾ ಪ್ರಯೋಗಶಾಲೆಗಳಲ್ಲಿ ತೆಂಗಿನ ಕಪ್ಪು ತಲೆ ಹುಳುವಿನ ನಿಯಂತ್ರಣಕ್ಕಾಗಿ ಪರೋಪಜೀವಿಗಳ ಉತ್ಪಾದನೆ ಮಾಡಿ ಈ ಕೀಟ ಭಾದಿತ ತೋಟಗಳ ರೈತರಿಗೆ ಉಚಿತವಾಗಿ ವಿತರಣೆ ಮಾಡುವುದು.
2. ರೋಗ ಮತ್ತು ಕೀಟಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ಖರೀದಿಸಿ ಸಸ್ಯ ಸಂರಕ್ಷಣೆ ಕ್ರಮಗಳನ್ನು ಕೈಗೊಂಡ ರೈತರಿಗೆ ಸಹಾಯಧನವನ್ನು ನೀಡುವುದು

## IV. ಯೋಜನೆಯ ಮುಖ್ಯ ಘಟಕ ಕಾರ್ಯಕ್ರಮಗಳು :

1. ಪರೋಪಜೀವಿಗಳ (ಗೋನಿಯೋಜಸ್ /ಬ್ರಾಕಿಮೇರಿಯ) ಉತ್ಪಾದನೆ.
2. ಸಸ್ಯ ಸಂರಕ್ಷಣೆ ಔಷಧಿಗಳನ್ನು ಖರೀದಿಸಿದ ರೈತರಿಗೆ ಸಹಾಯಧನ..
3. ಮೂಲಭೂತ ಸೌಕರ್ಯ .
4. ಸಿಬ್ಬಂದಿ ವೇತನ, ವೈದ್ಯಕೀಯ ವೆಚ್ಚ.

## V. ಅನುದಾನ ಮತ್ತು ಸಹಾಯಧನ ವಿಧಾನ:

### 1. ಪರೋಪಜೀವಿಗಳ (ಗೋನಿಯೋಜಸ್ / ಬ್ರಾಕಿಮೇರಿಯ) ಉತ್ಪಾದನೆ:

2013–14 ನೇ ಸಾಲಿಗೆ ಪರೋಪಜೀವಿಗಳಾದ ಗೋನಿಯೋಜಸ್ ಉತ್ಪಾದನೆಗಾಗಿ (@0.25 ಪೈಸೆ ರಂತೆ) ಒಟ್ಟು ರೂ.100.00 ಲಕ್ಷ ಮತ್ತು ಬ್ರಾಕಿಮೇರಿಯ ಉತ್ಪಾದನೆಗಾಗಿ (@0.50ಪೈಸೆ) ಒಟ್ಟು ರೂ.0.50 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿದೆ. **KTTP ನಿಯಮಾವಳಿಯಂತೆ ಅನುಸರಿಸಿ ಉತ್ಪಾದಿಸುವುದು.**

## 2. ಸಸ್ಯ ಸಂರಕ್ಷಣೆ ಔಷಧಿಗಳಿಗೆ ಸಹಾಯಧನ:

ಸಸ್ಯ ಸಂರಕ್ಷಣೆ ಔಷಧಿಗಳ ಖರೀದಿಗಾಗಿ ರೈತರಿಗೆ ಸಹಾಯಧನ ನೀಡಲು, 2014-15 ನೇ ಸಾಲಿಗೆ ಒಟ್ಟು ರೂ.73.50 ಲಕ್ಷಗಳ ಅನುದಾನವನ್ನು ಮೀಸಲಿಡಲಾಗಿದೆ. ಸದರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಒಂದು ಘಟಕಕ್ಕೆ (1 ಹೆಕ್ಟೇರ್) ತಗಲುವ ಒಟ್ಟಾರೆ ವೆಚ್ಚದ ಶೇ.50 ರಂತೆ ಗರಿಷ್ಠ ರೂ.2000/-ಗಳ ಸಹಾಯಧನವನ್ನು ರೈತ ಫಲಾನುಭವಿಗಳಿಗೆ ಗರಿಷ್ಠ 2 ಹೆಕ್ಟೇರ್‌ವರೆಗೆ ಮಾತ್ರ ನೀಡುವುದು.

### 3. ಮೂಲಭೂತ ಸೌಕರ್ಯ :

ಪ್ರಯೋಗಶಾಲೆಗೆ ಅವಶ್ಯಕತೆ ಇರುವ ಪರಿಕರಗಳನ್ನು ಖರೀದಿಸಲು/ಕಟ್ಟಡದ ದುರಸ್ತಿ, ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು,ಇತ್ಯಾದಿಗಳಿಗಾಗಿ ಒಟ್ಟು ರೂ.52.84 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಪ್ರಯೋಗಶಾಲೆಗಳಲ್ಲಿ ಕಾಮಗಾರಿ/ಪರಿಕರಗಳು/ಉಪಕರಣಗಳನ್ನು ಖರೀದಿಸಿದ್ದಲ್ಲಿ KTTP ನಿಯಮನುಸಾರ ಮಾತ್ರ ವೆಚ್ಚ ಭರಿಸುವುದು.

### 4. ಸಿಬ್ಬಂದಿ ವೇತನ ಮತ್ತು ವೈದ್ಯಕೀಯ ವೆಚ್ಚದ ಮರುಪಾವತಿ

ಸದರಿ ಯೋಜನೆಯಡಿ ಬರುವ ಸಿಬ್ಬಂದಿಗಳಿಗೆ ವೇತನ, ತುಟ್ಟಿಭತ್ಯೆ, ಪ್ರವಾಸ ಭತ್ಯೆ, ಇತರೆ ಭತ್ಯೆ,ವೈದ್ಯಕೀಯ ವೆಚ್ಚ ಹಾಗೂ ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ರೂ. 24.00 ಲಕ್ಷಗಳ ಅನುದಾನವನ್ನು ಮೀಸಲಿಡಲಾಗಿದೆ.

2014-15 ನೇ ಸಾಲಿನಲ್ಲಿ ಈ ಮೇಲ್ಕಂಡ ಅನುದಾನವನ್ನು ಭರಿಸಲು ವಿವಿಧ ಉಪ-ಶೀರ್ಷಿಕೆವಾರು ವಿವರ ಈ ಕೆಳಕಂಡಂತೆ ವಿವರಿಸಿದೆ.

| ಕ್ರಮ ಸಂಖ್ಯೆ | ವಿವರಗಳು | ಉಪಶೀರ್ಷಿಕೆ (object code) | ಲಭ್ಯವಿರುವ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|
| 1. | ಅನುದಾನ ನಿರ್ವಹಣೆಯ ವೆಚ್ಚ | 200 | 226.84 |
| 2. | ವೇತನ | 003 | 15.51 |
| 3. | ತುಟ್ಟಿಭತ್ಯೆ | 011 | 2.25 |
| 4. | ಇತರೆ ಭತ್ಯೆ | 014 | 5.00 |
| 5. | ಪ್ರವಾಸ ಭತ್ಯೆ | 041 | 1.00 |
| 5. | ವೈದ್ಯಕೀಯ ವೆಚ್ಚ | 020 | 0.10 |
| 6. | ವೈದ್ಯಕೀಯ ವೆಚ್ಚದ ಮರುಪಾವತಿ | 021 | 0.50 |
| | **ಒಟ್ಟು** | | **250.84** |

## VI. ತಾಂತ್ರಿಕ ವೈಶಿಷ್ಟತೆಗಳು ಹಾಗೂ ಅನುಷ್ಠಾನದ ನಿದಾನ:

### A. ತೆಂಗಿನ ಕಪ್ಪು ತಲೆ ಹುಳುವಿನ ನಿಯಂತ್ರಣೆಗಾಗಿ ಪರೋಪಜೀವಿಗಳ ಉತ್ಪಾದನೆ ಹಾಗೂ ವಿತರಣೆ:

1. ಗೋನಿಯೋಜಸ್ ಪರೋಪಜೀವಿಗಳನ್ನು ಗುತ್ತಿಗೆ ಆಧಾರದ ಮೇಲೆ ರೂ.0.25 ಗಳಿಗೆ ಮೀರದಂತೆ ಪ್ರತಿ ಪರೋಪಜೀವಿಯ ಉತ್ಪಾದನೆ ಕೈಗೊಳ್ಳಬೇಕು. ಇದರಲ್ಲಿ ಉತ್ಪಾದನಾ ವೆಚ್ಚ ರೂ.0.20 ಇದ್ದು , ಪರಿಕರಗಳಿಗಾಗಿ ರೂ.0.05 ಖರ್ಚು ಮಾಡಬೇಕು.

2. ಬ್ಯಾಕ್ಟೀರಿಯ ಪರೋಪಜೀವಿಗಳನ್ನು ಗುತ್ತಿಗೆ ಆಧಾರದ ಮೇಲೆ ರೂ.0.50 ಗಳಿಗೆ ಮೀರದಂತೆ ಪ್ರತಿ ಪರೋಪಜೀವಿಯ ಉತ್ಪಾದನೆ ಕೈಗೊಳ್ಳಬೇಕು. ಇದರಲ್ಲಿ ಉತ್ಪಾದನಾ ವೆಚ್ಚ ರೂ.0.45 ಇದ್ದು, ಪರಿಕರಗಳಿಗಾಗಿ ರೂ.0.05 ಖರ್ಚು ಮಾಡಬೇಕು.
3. **ಪರೋಪಜೀವಿಗಳ ಉತ್ಪಾದನೆಗೆ ಅವಶ್ಯವಿರುವ ಮಾನವ ಸಂಪನ್ಮೂಲವನ್ನು KTTP ನಿಯಮಾವಳಿಯಂತೆ ದರಪಟ್ಟಿ/ಟೆಂಡರ್ ಕರೆದು ಕ್ರಮವಹಿಸುವುದು.**
4. **ಪರೋಪಜೀವಿಗಳ ಉತ್ಪಾದನೆಗೆ ಬೇಕಾದ ಪರಿಕರಗಳನ್ನು ಅಗತ್ಯಕ್ಕನುಗುಣವಾಗಿ ಪ್ರತ್ಯೇಕವಾಗಿ ಅಧಿಕೃತ ಸಂಸ್ಥೆಗಳಿಂದ KTTP ನಿಯಮಾನುಸಾರ ಖರೀದಿಸಿ ಬಳಸಲು ಸಂಬಂಧಪಟ್ಟ ವಹಿಗಳಲ್ಲಿ ದಾಖಲಿಸಿ ನಿರ್ವಹಿಸುವುದು.**
5. ಪ್ರಯೋಗಶಾಲೆಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ವರ್ಗದವರು ಸಹ ಪರೋಪಜೀವಿ ಉತ್ಪಾದನಾ ಕಾರ್ಯವನ್ನು ನಿರ್ವಹಿಸಬೇಕು.
6. ಪರೋಪಜೀವಿಗಳ ಉತ್ಪಾದನಾ ಬಿಡುಗಡೆ ಇತ್ಯಾದಿ ವಿವರಗಳನ್ನು ಸಂಬಂಧಪಟ್ಟ ವಹಿಗಳಲ್ಲಿ ದಾಖಲಿಸಿ ನಿರ್ವಹಿಸುವುದು.
7. ಪರೋಪಜೀವಿಗಳನ್ನು ಕೀಟ ಬಾಧೆ ಕಾಣಿಸಿಕೊಳ್ಳುವ ಕಾಲಸೂಚಿಗೆ ಅನುಗುಣವಾಗಿ ಪರಿಣಾಮಕಾರಿಯಾಗಿ ಉತ್ಪಾದನೆ ಕೈಗೊಳ್ಳಬೇಕು.
8. ಪರೋಪಜೀವಿ ಉತ್ಪಾದನಾ ಕೇಂದ್ರದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು.
9. ಎಲ್ಲಾ ಪ್ರಯೋಗಶಾಲೆಗಳು ಮಾರ್ಗಸೂಚಿಯಲ್ಲಿ ಸೂಚಿಸಿದಂತೆ ಕಾರ್ಯ ನಿರ್ವಹಿಸಬೇಕು. ಪರೋಪಜೀವಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಕೈಗೊಂಡು ಬೇಡಿಕೆ ಇರುವ ಜಿಲ್ಲೆಗಳಿಗೆ ಸರಬರಾಜು ಮಾಡುವುದು.
10. **ಪರೋಪಜೀವಿಗಳ ಉತ್ಪಾದನೆಯನ್ನು ನಿರಂತರವಾಗಿ ಕೈಗೊಳ್ಳಬೇಕು ಹಾಗೂ ಬೇಸಿಗೆ ಕಾಲದ ಪ್ರಾರಂಭದಲ್ಲಿ ಕೀಟ ಬಾಧೆಯು ಅಧಿಕವಾಗುವ ಪ್ರಯುಕ್ತ ಈ ಸಮಯದಲ್ಲಿ ಉತ್ಪಾದನೆಯನ್ನು ಹೆಚ್ಚಿಗೆ ಕೈಗೊಳ್ಳಬೇಕು. ಅದರಂತೆ ಈ ಬಗ್ಗೆ ಕಾರ್ಯಸೂಚಿಗಳನ್ನು ಸಿದ್ಧಪಡಿಸಿ ಅನುಷ್ಟಾನಗೊಳಿಸುವುದು.**
11. ಪರೋಪಜೀವಿಗಳ ಉತ್ಪಾದನೆಗೆ ಅಗತ್ಯವಾಗಿರುವ ಮೂಲಭೂತ ಸೌಕರ್ಯಗಳಿಗೆ ಅವಕಾಶ ಮಾಡಿಕೊಂಡು ಪರೋಪಜೀವಿಗಳ ಉತ್ಪಾದನೆ ಕೈಗೊಳ್ಳಬೇಕು.
12. **ಪರೋಪಜೀವಿಗಳನ್ನು ಬಿಡುಗಡೆ ಮಾಡುವ ಮುನ್ನ RSK/ಪ್ರಯೋಗಶಾಲೆ/ಹಾರ್ಟಿಕ್ಲಿನಿಕ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು ಸಂಬಂಧಪಟ್ಟ ಗ್ರಾಮಗಳನ್ನು ಗುರುತಿಸಿ, ತೆಂಗಿನ ಕಪ್ಪು ತಲೆ ಹುಳುವಿನ ಬಾಧೆಗೆ ಒಳಗಾದ ತೋಟಗಳ ಸಮೀಕ್ಷೆಯನ್ನು ಕೈಗೊಂಡು, Sample survey ಮಾಡಿ, ನಕ್ಷೆ ತಯಾರಿಸಿ, ಆ ತೋಟಗಳಲ್ಲಿ ಕೀಟ ಭಾದೆಗೊಳಗಾದ ಮರಗಳನ್ನು ಗುರುತು ಮಾಡಿ, ಕೀಟದ ಹಾವಳಿಯು ಅಲ್ಪ/ಮಧ್ಯಮ ವರ್ಗದಲ್ಲಿದ್ದರೆ ಮಾತ್ರ ಪರೋಪಜೀವಿಗಳಿಂದ ನಿಯಂತ್ರಣ ಕ್ರಮಕೈಗೊಳ್ಳಲು ಪರೋಪಜೀವಿಗಳನ್ನು ಉಚಿತವಾಗಿ ಬಿಡುಗಡೆ ಮಾಡಲು ವ್ಯವಸ್ಥೆ ಮಾಡತಕ್ಕದ್ದು. ತೀವ್ರ ಹಾವಳಿಯಿದ್ದಲ್ಲಿ ಸಸ್ಯ ಸಂರಕ್ಷಣೆ ಕ್ರಮಗಳನ್ನು ಕೈಗೊಳ್ಳಲು ಕ್ರಮವಹಿಸುವಂತೆ ರೈತರಿಗೆ ಸಲಹೆ ನೀಡುವುದು.**
13. ಪರೋಪ ಜೀವಿಗಳನ್ನು ಬಿಡುಗಡೆಗೊಳಿಸಿದ ತೋಟಗಳ ಫಲಾನುಭವಿ ಹೆಸರು, ಗ್ರಾಮ, ದೂರವಾಣಿ ಸಂಖ್ಯೆ, ಸರ್ವೆ ನಂ., ಮರಗಳ ಸಂಖ್ಯೆ, ಫಲಾನುಭವಿ ಸಹಿ, ಇತ್ಯಾದಿ ಮಾಹಿತಿಯನ್ನು ವಿತರಣಾ ವಹಿಯಲ್ಲಿ ದಾಖಲಿಸತಕ್ಕದ್ದು.
14. ತೋಟಗಳಲ್ಲಿ ಕೀಟ ನಿಯಂತ್ರಣೆಗಾಗಿ ತೆಗೆದುಕೊಳ್ಳಬೇಕಾದ ಇತರೆ ಹತೋಟಿ ಕ್ರಮಗಳನ್ನು ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕಾ ಅಧಿಕಾರಿಗಳು/ಪ್ರಯೋಗಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ರೈತರಿಗೆ ತಿಳಿಸುವುದು.
15. ಪರೋಪಜೀವಿಯ ಸಮರ್ಪಕ ಉತ್ಪಾದನೆಯ ಬಗ್ಗೆ ಪ್ರಯೋಗಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು/ತಾಲ್ಲೂಕಿನ ಹಿ.ಸ.ತೋ.ನಿ (ಜಿಪಂ)/ಸ.ತೋ.ನಿ (ಜಿಪಂ) ರವರು ನೇರ ಜವಾಬ್ದಾರರಾಗಿರುತ್ತಾರೆ.

16. **ಈ ಕಾಂಪೋನೆಂಟ್‌ನ ವೆಚ್ಚವನ್ನು object code 200 ರಲ್ಲಿ ಭರಿಸುವುದು.**

## B. <u>ರೋಗ/ಕೀಟಗಳ ಸಮಗ್ರ ನಿಯಂತ್ರಣೆಗೆ ಸಸ್ಯ ಸಂರಕ್ಷಣೆ ಔಷಧಿಗಳ ಖರೀದಿಗಾಗಿ ಸಹಾಯಧನ:</u>

1. ವಿವಿಧ ತೋಟಗಾರಿಕೆ ಬೆಳೆಗಳಿಗೆ ತಗಲುವ ಕೀಟ ಮತ್ತು ರೋಗಗಳ ನಿಯಂತ್ರಣಕ್ಕಾಗಿ ಅನುಬಂಧ–1 ರನ್ವಯ ಸಸ್ಯ ಸಂರಕ್ಷಣಾ ಔಷಧಿ (ಜೈವಿಕ ಪೀಡೆನಾಶಕಗಳು, ಫಿರಮೋನ್ ಟ್ರಾಪ್ಸ್, ರಾಸಾಯನಿಕ ಸಸ್ಯ ಸಂರಕ್ಷಣಾ ಔಷಧಿ)ಗಳನ್ನು ಖರೀದಿಸಿದ ರೈತ ಫಲಾನುಭವಿಗಳಿಗೆ, ಇಲಾಖಾವತಿಯಿಂದ ಅನುಮೋದನೆಯಾಗಿರುವ L1 ದರವನ್ನು ಪರಿಗಣಿಸಿ ಸಹಾಯಧನವನ್ನು ನೀಡುವುದು.
2. ಸಸ್ಯ ಸಂರಕ್ಷಣಾ ಔಷಧಿಗಳನ್ನು ಕೃಷಿ/ತೋಟಗಾರಿಕೆ ವಿಶ್ವವಿದ್ಯಾನಿಲಯದ (ಬೆಂಗಳೂರು/ಧಾರವಾಡ, ಬಾಗಲಕೋಟೆ/ ಶಿವಮೊಗ್ಗ) ವಿಜ್ಞಾನಿಗಳು ಸುಧಾರಿತ ಬೇಸಾಯ ಕ್ರಮಗಳಲ್ಲಿ ಸೂಚಿಸಿರುವಂತೆ ನಿಗದಿತ ಪ್ರಮಾಣದಲ್ಲಿ ಉಪಯೋಗಿಸುವಂತೆ ರೈತರಿಗೆ ಅಧಿಕಾರಿಗಳು ಮಾರ್ಗದರ್ಶನವನ್ನು ನೀಡುವುದು.
3. ಸದರಿ ಯೋಜನೆಯಡಿ ರೈತರು ಖರೀದಿಸಿದ ಸಸ್ಯ ಸಂರಕ್ಷಣಾ ಔಷಧಿಗಳ ಬಿಲ್ಲುಗಳಿಗೆ ಕಡ್ಡಾಯವಾಗಿ TIN ಸಂಖ್ಯೆ ಇರಬೇಕು.
4. **ಈ ಯೋಜನೆಯಡಿ ಸಸ್ಯ ಸಂರಕ್ಷಣೆ ಔಷಧಿಗಳನ್ನು ಖರೀದಿಸಿದ ರೈತರಿಗೆ ಒಂದು ಘಟಕಕ್ಕೆ (1 ಹೆಕ್ಟೇರ್) ತಗಲುವ ಒಟ್ಟಾರೆ ವೆಚ್ಚದ ಶೇ.50 ರಂತೆ ಗರಿಷ್ಠ ರೂ.2000/–ಗಳ ಸಹಾಯಧನವನ್ನು ರೈತ ಫಲಾನುಭವಿಗಳಿಗೆ ಗರಿಷ್ಠ 2 ಹೆಕ್ಟೇರ್‌ವರೆಗೆ ಮಾತ್ರ ನೀಡುವುದು.**
5. **<u>ಯಾವುದೇ ನಿಬಂಧನೆಗೆ ಒಳಪಟ್ಟ ಅಥವಾ ನಿಷೇಧಿಸಿದ ಸಸ್ಯ ಸಂರಕ್ಷಣಾ ಔಷಧಿಗಳನ್ನು ಖರೀದಿಸಿದ ರೈತರಿಗೆ ಸಹಾಯಧನವನ್ನು ಒದಗಿಸಲು ಅವಕಾಶವಿರುವುದಿಲ್ಲ.</u>**
6. ಪ್ರೋತ್ಸಾಹಧನವನ್ನು ನೀಡುವಾಗ ರೈತ ಫಲಾನುಭವಿಯು ಸಲ್ಲಿಸಿದ ಎಲ್ಲಾ ದಾಖಾಲಾತಿಗಳನ್ನು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಯು ಪರಿಶೀಲಿಸಿ ಅನುಬಂಧ–2 ರನ್ವಯ ರೈತರಿಂದ ಸ್ವಯಂ ಘೋಷಣಾ ಪತ್ರವನ್ನು ಪಡೆದು ಧೃಡೀಕರಿಸುವುದು.
7. ಸಹಾಯಧನವನ್ನು ನೇರವಾಗಿ ರೈತ ಫಲಾನುಭವಿಯ ಬ್ಯಾಂಕ್ ಖಾತೆಗೆ ಜಮಾ ಮಾಡುವುದು.
8. ರೈತರಿಗೆ ಸವಲತ್ತುಗಳನ್ನು ನೀಡುವಾಗ ಎಲ್ಲಾ ವರ್ಗದ ರೈತರಿಗೂ ಆದ್ಯತೆ ನೀಡಿ ಸವಲತ್ತುಗಳನ್ನು ನೀಡಬೇಕು.
9. ಇಲಾಖಾವತಿಯಿಂದ ಅನುಮೋದನೆಯಾಗಿರುವ Emphanal list ನಲ್ಲಿರುವ ರೋಗ ಮತ್ತು ಕೀಟನಾಶಕಗಳನ್ನು ಮಾತ್ರ ರೈತರು ಖರೀದಿಸಿದಲ್ಲಿ ಸದರಿ ರೈತರಿಗೆ ಸಹಾಯಧನ ನೀಡಲಾಗುವುದು.
10. ಈ ಕಾಂಪೋನೆಂಟ್‌ನ ವೆಚ್ಚವನ್ನು Object Code 200 ರಲ್ಲಿ ಭರಿಸಬೇಕು.

## C. <u>ಮೂಲಭೂತ ಸೌಕರ್ಯ</u> :

1. ಪರೋಪಜೀವಿಗಳ ಉತ್ಪಾದನೆಗೆ ಅಗತ್ಯವಾಗಿರುವ ಮೂಲಭೂತ ಸೌಕರ್ಯಗಳಿಗೆ ಉಪ ಶೀರ್ಷಿಕೆ (object code) 200 ರಲ್ಲಿ ವೆಚ್ಚವನ್ನು ಭರಿಸಲು ಅವಕಾಶ ಮಾಡಿಕೊಂಡು ಪರೋಪಜೀವಿಗಳ ಉತ್ಪಾದನೆ ಕೈಗೊಳ್ಳುವುದು.
2. ಪ್ರಯೋಗಶಾಲೆ ನಿರ್ವಹಣೆಗೆ ಅವಶ್ಯವಿರುವ ಕಟ್ಟಡರಿಪೇರಿ, ಮೆಶ್‌ಅಳವಡಿಕೆ, Electronic ಉಪಕರಣಗಳು, ಉಪಕರಣಗಳ ಖರೀದಿ, ದುರಸ್ಥಿ, ಇಂಧನವೆಚ್ಚ, ವಿದ್ಯುಚ್ಛಕ್ತಿ, ವಾಹನ ವೆಚ್ಚ (ಬಾಡಿಗೆ/ಸರ್ಕಾರಿ ವಾಹನ), ಮುಂತಾದ ವೆಚ್ಚಗಳನ್ನು ಭರಿಸಬಹುದಾಗಿರುತ್ತದೆ. ಈ ಕಾಂಪೋನೆಂಟ್‌ನ ವೆಚ್ಚವನ್ನು ಉಪ ಶೀರ್ಷಿಕೆ (Object Code) 200 ನಲ್ಲಿ ಭರಿಸುವುದು.

**D. <u>ಸಿಬ್ಬಂದಿ ವೇತನ ಮತ್ತು ವೈದ್ಯಕೀಯ ವೆಚ್ಚದ ಮರುಪಾವತಿ:</u>**

ಸದರಿ ಯೋಜನೆಯಡಿ ಬರುವ ಸಿಬ್ಬಂದಿಗಳಿಗೆ ವೇತನ, ತುಟ್ಟಿಭತ್ಯೆ, ಪ್ರವಾಸ ಭತ್ಯೆ, ಇತರೆ ಭತ್ಯೆ, ವೈದ್ಯಕೀಯ ವೆಚ್ಚ ಹಾಗೂ ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ಸದರಿ ಕಾರ್ಯಕ್ರಮದಡಿ ಮೀಸಲಿರುವ ಉಪಶೀರ್ಷಿಕೆವಾರು ವೆಚ್ಚ ಭರಿಸುವುದು.

**VII.<u>ಫಲಾನುಭವಿಗಳ ಅರ್ಹತೆ, ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಫಲಾನುಭವಿಗಳ ಆಯ್ಕೆ ಮತ್ತು ಸಹಾಯಧನದ ವಿತರಣೆ</u> :**

1. ತೆಂಗಿನ ಕಪ್ಪು ತಲೆ ಹುಳುವಿನ ಬಾಧೆಗೆ ಒಳಪಟ್ಟ ತೆಂಗಿನ ಮರಗಳಿಗೆ ಪರೋಪಜೀವಿಗಳ ಬಿಡುಗಡೆಗೆ ಕೋರಿ ರೈತರು ಅರ್ಜಿ ಸಲ್ಲಿಸುವುದು.

2. ಅರ್ಜಿ ಸಲ್ಲಿಸಿರುವ ತೋಟಗಳಿಗೆ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕಾ ಅಧಿಕಾರಿಗಳು ಸಮೀಕ್ಷೆಯನ್ನು ಕೈಗೊಳ್ಳುವುದು ಹಾಗೂ ತೀವ್ರವಾಗಿ ಬಾಧೆಗೊಳಗಾದ ತೆಂಗಿನ ತೋಟಗಳಿಗೆ ಆದ್ಯತೆ ನೀಡುವುದು.

3. ಪರೋಪಜೀವಿಗಳನ್ನು ನೇರವಾಗಿ ರೈತರಿಗೆ ನೀಡಿದಲ್ಲಿ ನಿಗದಿತ ಅರ್ಜಿ ನಮೂನೆಯಲ್ಲಿ ಸಂಬಂಧಿಸಿದ ರೈತರಿಂದ ಬೇಡಿಕೆ ಪತ್ರವನ್ನು ಪಡೆದು ಸ್ಥಳ ಪರಿಶೀಲಿಸಿ ಕೀಟಬಾಧೆ ಪ್ರಮಾಣಗಳನ್ನು ಅವಲೋಕಿಸಿ ವಿತರಿಸುವುದು ಹಾಗೂ ಈ ವಿಷಯವನ್ನು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕಾ ಅಧಿಕಾರಿರವರಿಗೆ ಮಾಹಿತಿ ನೀಡುವುದು (ಅನುಬಂಧ–1).

4. **ಪ್ರಯೋಗಶಾಲೆಯಲ್ಲಿ ಉತ್ಪಾದನೆ ಆಗಿರುವ ಪರೋಪಜೀವಿಗಳನ್ನು ಕಪ್ಪು ತಲೆ ಹುಳುವಿನ ಬಾಧೆಯಿಂದ ಹಾನಿಯಾಗಿರುವ ಪ್ರತಿ ತೆಂಗಿನ ಮರಕ್ಕೆ 10 ಪರೋಪಜೀವಿಗಳನ್ನು ಕನಿಷ್ಠ 4 ಬಾರಿ 15 ದಿನಗಳ ಅಂತರದಲ್ಲಿ ಬಿಡತಕ್ಕದ್ದು.**

5. ರೋಗ ಮತ್ತು ಕೀಟ ಬಾಧೆಗೆ ತುತ್ತಾದ ತೋಟಗಾರಿಕೆ ಬೆಳೆಗಳ ನಿರ್ವಹಣೆಗಾಗಿ ರೈತ ಫಲಾನುಭವಿ–ಗಳಿಗೆ ಸಹಾಯಧನವನ್ನು ನೀಡುವುದು ಹಾಗೂ ಸಹಾಯಧನವನ್ನು ನೀಡಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸುವುದು.

   - ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ, ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.

   - ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.

   - ರೈತರು ತೋಟಗಾರಿಕೆ ಬೆಳೆಯನ್ನು ಬೆಳೆದಿರಬೇಕು ಹಾಗೂ ಬೆಳೆದಂತಹ ತೋಟಗಾರಿಕೆ ಬೆಳೆಗಳಿಗೆ ತಗಲುವ ವಿವಿಧ ಕೀಟ ಮತ್ತು ರೋಗಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳನ್ನು (ಜೈವಿಕ ಪೀಡೆನಾಶಕಗಳು, ಫೆರಮೋನ್ ಟ್ರಾಪ್ಸ್, ರಾಸಾಯನಿಕ ಸಸ್ಯ ಸಂರಕ್ಷಣಾ ಔಷಧಿ) ಖರೀದಿಸಿದಲ್ಲಿ, ಸಹಾಯಧನಕ್ಕಾಗಿ ಅನುಬಂಧ–1 ರನ್ವಯ ಅರ್ಜಿ ಸಲ್ಲಿಸುವುದು.

- ನಿಗದಿತ ನಮೂನೆಯಲ್ಲಿ ಫಲಾನುಭವಿಯ ಭಾವಚಿತ್ರ ಹಾಗೂ ಫಲಾನುಭವಿ ಭರ್ತಿ ಮಾಡಿ ಸಹಿ ಮಾಡಿದ ಅರ್ಜಿ (ದ್ವಿ ಪ್ರತಿಯಲ್ಲಿ).

- ಸಸ್ಯ ಸಂರಕ್ಷಣೆ ಔಷಧಿ ಖರೀದಿಗಾಗಿ ಸಹಾಯಧನವನ್ನು ನೀಡಿರುವ ಕುರಿತಂತೆ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಯು ಸೂಕ್ತವಾದ ದಾಖಲಾತಿಗಳನ್ನು ನಿರ್ವಹಣೆ ಮಾಡುವುದು.

- ಈ ಯೋಜನೆಯಡಿ ಸಹಾಯಧನ ಪಡೆಯಲು ಇಚ್ಛಿಸುವ ರೈತರು ತಾವು ಖರೀದಿಸಿದ ಸಸ್ಯ ಸಂರಕ್ಷಣಾ ಔಷಧಿಗಳ ಬಿಲ್ಲುಗಳಿಗೆ ಕಡ್ಡಾಯವಾಗಿ TIN ಸಂಖ್ಯೆ ಇರುವ ಬಿಲ್ಲುಗಳನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

- ಪಹಣಿ (RTC), ಬೆಳೆ ದೃಢೀಕರಣ ಪತ್ರ, ಜಮೀನಿನ ಚೆಕ್‌ಬಂಧಿ ಹಾಗೂ ರೈತರ ಬ್ಯಾಂಕ್ ಖಾತೆಯುಳ್ಳ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿಗಳನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

- **ಪ್ರೋತ್ಸಾಹಧನವನ್ನು ನೀಡುವಾಗ ರೈತ ಫಲಾನುಭವಿಯು ಸಲ್ಲಿಸಿದ ಎಲ್ಲಾ ದಾಖಾಲಾತಿಗಳನ್ನು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಯು ಪರಿಶೀಲಿಸಿ, ಅನುಬಂಧ–2 ರನ್ವಯ ರೈತರಿಂದ ಸ್ವಯಂ ಘೋಷಣಾ ಪತ್ರವನ್ನು ಪಡೆದು ಧೃಢೀಕರಿಸುವುದು.**

- ರೈತರು ಸಹಾಯಧನವನ್ನು ಪಡೆಯಲು, ಸಂಬಂಧಪಟ್ಟ ದಾಖಲಾತಿಗಳನ್ನು ಸಲ್ಲಿಸುವಾಗ ಕಡ್ಡಾಯವಾಗಿ ವ್ಯಾಟ್ ಸಂಖ್ಯೆ/ಮಾರಾಟ ತೆರಿಗೆ ಸಂಖ್ಯೆ ನಮೂದಿಸಿರುವ ಬಿಲ್ಲಿನೊಂದಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸುವುದು.

- ಎಲ್ಲಾ ವರ್ಗದ ಫಲಾನುಭವಿಗಳು ಅಂದರೆ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ /ಸಣ್ಣ ಹಾಗೂ ಅತೀ ಸಣ್ಣ ರೈತರು ಹಾಗೂ ರೈತ ಮಹಿಳೆಯರು ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ. ಪರಿಶಿಷ್ಟ ಜಾತಿ ವರ್ಗದವರಿಗೆ (SC) ಒಟ್ಟು ಅನುದಾನದ ಕನಿಷ್ಟ ಶೇ.16.25%ರಷ್ಟು ಮೀಸಲಿಡಬೇಕು. ಪರಿಶಿಷ್ಟ ಪಂಗಡದವರಿಗೆ (ST) ಒಟ್ಟು ಅನುದಾನದ ಕನಿಷ್ಟ ಶೇ.6.55%ರಷ್ಟು ಮೀಸಲಿಡಬೇಕು. ಸಣ್ಣ, ಅತೀ ಸಣ್ಣ ರೈತರು ಮತ್ತು ರೈತ ಮಹಿಳೆಯರಿಗೆ ಕನಿಷ್ಟ ಶೇ.33%ರಷ್ಟು ಅನುದಾನ ಮೀಸಲಿಡಬೇಕು.

- ಸಹಾಯಕ ತೋಟಗಾರಿಕೆ ಅಧಿಕಾರಿ (RSK)ಗಳು ಅರ್ಜಿ ಸಲ್ಲಿಸಿದ ರೈತರ ತಾಕುಗಳನ್ನು ಪರಿಶೀಲಿಸಿ ಸಸ್ಯ ಸಂರಕ್ಷಣೆ ಔಷಧಿಗಳ ಬಳಕೆ ಬಗ್ಗೆ ಖಾತರಿ ಪಡಿಸಿಕೊಂಡು, ದೃಢೀಕರಿಸಿ ಸಹಾಯಧನ ಮೊತ್ತಕ್ಕೆ ಶಿಫಾರಸ್ಸು ಮಾಡುವುದು.

- ಜಿಲ್ಲೆಯ ತೋ.ಉ.ನಿ (ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಹಿ.ಸ.ತೋ.ನಿ ರವರು ನೀಡಿರುವ ವರದಿಯನ್ನು ಪರಿಶೀಲಿಸಿ ಮಾರ್ಗಸೂಚಿಯನ್ವಯ ಕಾರ್ಯಕ್ರಮ ಅನುಷ್ಟಾನಗೊಳಿಸಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಮಂಜೂರಾತಿ ಕ್ರಮಗಳನ್ನು ಕೈಗೊಳ್ಳುವುದು.

- ನಂತರ ಕೆಲಸವು ತೃಪ್ತಿಕರವಾಗಿದ್ದಲ್ಲಿ ಮಾತ್ರ ಸಹಾಯಧನದ ಮೊತ್ತವನ್ನು ಬಿಡುಗಡೆ ಮಾಡುವುದು.

- **ಆಯ್ಕೆಯಾದ ರೈತ ಫಲಾನುಭವಿಯ ಖಾತೆಗೆ ECS ಮುಖಾಂತರ ಸಹಾಯಧನವನ್ನು ಫಲಾನುಭವಿ ಖಾತೆಗೆ ಜಮಾ ಮಾಡುವುದು.**

## VIII. ತಾಂತ್ರಿಕ ಪರಿಶೀಲನಾ ಕ್ರಮಗಳು:

1. ಪರೋಪಜೀವಿಗಳ ಉತ್ಪಾದನೆಗೆ ಸಂಬಂಧಿಸಿದಂತೆ, ಪ್ರತಿ ಮಾಹೆಯಲ್ಲಿ ಪ್ರಯೋಗಶಾಲೆಯಲ್ಲಿ ಗುಣಮಟ್ಟದ ಪರೋಪಜೀವಿಗಳನ್ನು ಉತ್ಪಾದಿಸುವ ಬಗ್ಗೆ ತಾಲ್ಲೂಕು ಅಧಿಕಾರಿಗಳು/ತೋ.ಉ.ನಿ (ಜಿಪಂ) ರವರು ಪರಿಶೀಲಿಸುವುದು.
2. ಉತ್ಪಾದಿಸಿದ ಪರೋಪಜೀವಿಗಳನ್ನು ಕಪ್ಪು ತಲೆ ಹುಳುವಿಗೆ ಹಾನಿಯಾಗಿರುವ ತೆಂಗಿನ ತೋಟಗಳಿಗೆ ಸರಿಯಾದ ಹಂತ/ಪ್ರಮಾಣದಲ್ಲಿ ಬಿಡುಗಡೆ ಮತ್ತು ಕೀಟ ನಿಯಂತ್ರಣವಾಗಿದೆಯೇ ಎಂದು ಪ್ರತಿ ಹಂತದಲ್ಲಿಯೂ ಪರಿಶೀಲಿಸುವುದು.
3. ಸಸ್ಯ ಸಂರಕ್ಷಣೆ ಔಷಧಿಗಳಿಗೆ ಸಹಾಯಧನ ನೀಡಿರುವ ತೋಟಗಳಿಗೆ ಭೇಟಿ ನೀಡಿ ಸದ್ಬಳಕೆಯಾದ ಬಗ್ಗೆ ಪರಿಶೀಲಿಸುವುದು.

## IX. ಅನುಷ್ಠಾನ ವೇಳಾಪಟ್ಟಿ:

- ಯೋಜನೆಗೆ ನಿಗದಿಪಡಿಸಿದ ಅನುಷ್ಠಾನ ವೇಳಾಪಟ್ಟಿಯಂತೆ ಮತ್ತು MPIC ಅನುಸಾರ ಅನುಷ್ಠಾನಗೊಳಿಸತಕ್ಕದ್ದು.

## X. ಅನುಬಂಧಗಳು:

1..ಅರ್ಜಿ ನಮೂನೆ (ಅನುಬಂಧ–1).
2.ಅಧಿಕಾರಿಗಳ ತಾಕು ಪರೀಶಿಲನಾ ದೃಢೀಕರಣ ಪತ್ರ (ಅನುಬಂಧ–2).

## XI. ಆರ್ಥಿಕ ಪ್ರತ್ಯಾಯೋಜನೆ (Delegation of power):

ಈ ಯೋಜನೆ (**ಲೆಕ್ಕ ಶೀರ್ಷಿಕೆ: 2401–00–119–50–2**) ಯಡಿ ಮಾನವ ಸಂಪನ್ಮೂಲ/ಪರಿಕರ ಖರೀದಿಗಾಗಿ ಬಿಡುಗಡೆಯಾದ ಅನುದಾನವನ್ನು ನಿಯಮಾನುಸಾರ ಸಾದಿಲ್ವಾರು ಬಿಲ್ಲುಗಳನ್ನು ತಯಾರಿಸಿ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ–2ಟಿಎಫ್‌ಪಿ 2010. ದಿನಾಂಕ:30.4.2010ರ ಕ್ರಮ ಸಂಖ್ಯೆ.7ರ ಅನ್ವಯ ಪ್ರದತ್ತವಾದ ಆರ್ಥಿಕ ಪ್ರತ್ಯಾಧಿಕಾರವನ್ನು ಅನುಸರಿಸುವುದು

ಸಸ್ಯ ಸಂರಕ್ಷಣೆ ಔಷಧಿ ಖರೀದಿಗಾಗಿ ಸಹಾಯಧನ ನೀಡಲು ಬಿಡುಗಡೆಯಾದ ಅನುದಾನವನ್ನು ನಿಯಮಾನುಸಾರ ಸಾದಿಲ್ವಾರು ಬಿಲ್ಲು ಮತ್ತು ಮಂಜೂರಾತಿಗಳೊಂದಿಗೆ ಖಜಾನೆ ಮೂಲಕ ಫಲಾನುಭವಿಗಳಿಗೆ ಸಹಾಯಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೀಡುವುದು. ಮಂಜೂರಾತಿ ನೀಡಲು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ–2ಟಿಎಫ್‌ಪಿ 2010. ದಿನಾಂಕ:30.4.2010ರ ಕ್ರಮ ಸಂಖ್ಯೆ.11ರ ಅನ್ವಯ ಪ್ರದತ್ತವಾದ ಆರ್ಥಿಕ ಪ್ರತ್ಯಾಧಿಕಾರವನ್ನು ಅನುಸರಿಸುವುದು ಹಾಗೂ ಮಾರ್ಗಸೂಚಿಯಂತೆ ಮಂಜೂರು ಮಾಡಲು ತೋ.ಉ.ನಿ (ಜಿಪಂ) ರವರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

## XII. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು.

1. ಪ್ರತಿ ಮಾಹೆಯ ಪ್ರಗತಿ ವರಧಿಯನ್ನು ಇ–ಮೇಲ್ ಮುಖಾಂತರ ತಿಂಗಳ 3ನೇ ದಿನಾಂಕದ ಒಳಗಾಗಿ ತಪ್ಪದೇ ತೋಟಗಾರಿಕೆ ಜಂಟಿ ನಿದೇಶಕರು (ತೋಟದ ಬೆಳೆಗಳು ಮತ್ತು ಸಸ್ಯ ಸಂರಕ್ಷಣೆ) ಸಲ್ಲಿಸುವುದು.
2. ಅಂತಿಮ ಪ್ರಗತಿ ವರದಿಯ ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯನ್ನು ತೋಟಗಾರಿಕೆ ಜಂಟಿ ನಿರ್ದೇಶಕರು (ತೋಟದ ಬೆಳೆಗಳು ಮತ್ತು ಸಸ್ಯ ಸಂರಕ್ಷಣೆ) ರವರಿಗೆ ಸಲ್ಲಿಸುವುದು.
3. ತೆಂಗಿನ ತೋಟದಲ್ಲಿ ಕಪ್ಪು ತಲೆ ಹುಳುವಿಗೆ ತುತ್ತಾದ ಮರಗಳನ್ನು ನಿಯಂತ್ರಿಸಿದ ಬಣ್ಣದ ಭಾಹೆಗಳೊಂದಿಗೆ ಯಶೋಗಾಥೆಗಳನ್ನು ತೋಟಗಾರಿಕೆ ಜಂಟಿ ನಿದೇಶಕರು (ತೋಟದ ಬೆಳೆಗಳು ಮತ್ತು ಸಸ್ಯ ಸಂರಕ್ಷಣೆ) ರವರಿಗೆ ಸಲ್ಲಿಸುವುದು.

**ತೋಟಗಾರಿಕೆ ನಿರ್ದೇಶಕರು**

## **ಅನುಬಂಧ–1**

## <u>ರೈತರ ಅರ್ಜಿ ನಮೂನೆ</u> (ಬೇಡಿಕೆ ಪತ್ರ)

**ಇಂದ,**

————————————————

————————————————

————————————————

————————————————

**ಗೆ,**

————————————————

————————————————

————————————————

————————————————

**ಮಾನ್ಯರೆ,**

ನಾನು ಶ್ರೀ/ಶ್ರೀಮತಿ ———————————————, ಗ್ರಾಮ:——————————————ದಲ್ಲಿನ ——————————— ಸರ್ವೆ ನಂಬರ್‌ನಲ್ಲಿ ತೋಟಗಾರಿಕೆ ಬೆಳೆಯನ್ನು ಬೆಳೆದಿದ್ದು , ಸದರಿ ಬೆಳೆಗೆ ——————————ರೋಗ/ಕೀಟ ಭಾದೆ ಇತ್ಯಾದಿಗಳ ಹತೋಟಿಗಾಗಿ..................................<u>ಸಸ್ಯ ಸಂರಕ್ಷಣೆ ಔಷಧಿಯನ್ನು ಖರೀದಿ ಮಾಡಲು ತೋಟಗಾರಿಕೆ ಇಲಾಖೆಯಿಂದ ರೈತರಿಗೆ ನೀಡುವ ಪ್ರೋತ್ಸಾಹಧನವನ್ನು/ತೆಂಗು ಬೆಳೆಗೆ ತಗಲುವ ಕಪ್ಪು ತಲೆ ಹುಳುವಿನ ಭಾದೆಯ ನಿಯಂತ್ರಣಕ್ಕಾಗಿ ವಿತರಿಸುವ ಪರೋಪಜೀವಿಗಳನ್ನು ನೀಡಲು ಕೋರಿ ಅರ್ಜಿ ಸಲ್ಲಿಸಿರುತ್ತೇನೆ.</u>

**ತಮ್ಮ ವಿಶ್ವಾಸಿ**

**ರೈತ ಫಲಾನುಭವಿಯ ಸಹಿ**

**<u>ಫಲಾನುಭವಿಯ ಬ್ಯಾಂಕ್ ಖಾತೆ ವಿವರ:</u>**

1. ಬ್ಯಾಂಕ್ ಹೆಸರು ಮತ್ತು ವಿಳಾಸ:
3. ಬ್ಯಾಂಕ್ ಖಾತೆ ನಂ:

**ಸ್ಥಳ:**
**ದಿನಾಂಕ:**

**ಅನುಬಂಧ–2**

**ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ ಯೋಜನೆಯಡಿ ರೈತ ಫಲಾನುಭವಿಯ ಸ್ವಯಂ ಘೋಷಣೆ ನಮೂನೆ**

ಶ್ರೀ/ಶ್ರೀಮತಿ ................................................ ಬಿನ್/ಕೋ ......................... ಗ್ರಾಮ .................... ಹೋಬಳಿ ....................... ತಾಲ್ಲೂಕು ................................. ಜಿಲ್ಲೆ .................. ಆದ ನಾನು ------------ ತೋಟಗಾರಿಕೆ ಬೆಳೆಯನ್ನು ................. ವಿಸ್ತೀರ್ಣದಲ್ಲಿ ..................... ಸರ್ವೇ ನಂಬರನಲ್ಲಿ ಬೆಳೆದಿದ್ದು, ಸದರಿ ಬೆಳೆಗೆ ತಗಲಿರುವ --------------ಕೀಟ/ರೋಗನಿಯಂತ್ರಣಕ್ಕೆ ................................ ಸಸ್ಯಸಂರಕ್ಷಣೆ ಔಷಧಿಯನ್ನು ಖರೀದಿಸಿರುತ್ತೇನೆ. ಸದರಿ ಸಸ್ಯ ಸಂರಕ್ಷಣೆ ಔಷಧಿ ಖರೀದಿಗೆ ರೂ.___________/- ಮೊತ್ತದ ವೆಚ್ಚವನ್ನು ಭರಿಸಿರುತ್ತೇನೆ. ಇದಕ್ಕೆ ಸಂಬಂಧಿಸಿದ ಬಿಲ್ಲು/ರಸೀದಿಗಳನ್ನು ಲಗತ್ತಿಸಿರುತ್ತೇನೆ. ಸದರಿ ಸಹಾಯಧನವನ್ನು ಇಲಾಖೆ ನೀಡಿರುವ ಉದ್ದೇಶಕ್ಕೆ ಬಳಸಿಕೋಳ್ಳುತ್ತೇನೆ ಎಂದು ಈ ಮೂಲಕ ಘೋಷಿಸುತ್ತೇನೆ.

**ಫಲಾನುಭವಿಯ ಸಹಿ**
**( ಹೆಸರು ಮತ್ತು ವಿಳಾಸ)**

**ದಿನಾಂಕ:**
**ಸ್ಥಳ:**

**ಪರಿಶೀಲನಾ ಅಧಿಕಾರಿ ಧೃಡೀಕರಣ**

ಶ್ರೀ/ಶ್ರೀಮತಿ....................................... ಬಿನ್/ಕೋ ..................... ಗ್ರಾಮ ........................ ಹೋಬಳಿ ........................ ತಾಲ್ಲೂಕು .......................... ಜಿಲ್ಲೆ ................ ರವರು ................... ಬೆಳೆಯನ್ನು ................. ವಿಸ್ತೀರ್ಣದಲ್ಲಿ......................ಸರ್ವೇ ನಂಬರನಲ್ಲಿ ಬೆಳೆದಿದ್ದು, ಬೆಳೆಗೆ ತಗಲಿರುವ ................ ಕೀಟ/ರೋಗ ನಿಯಂತ್ರಣಕ್ಕೆ ............. ಸಸ್ಯ ಸಂರಕ್ಷಣಾ ಔಷಧಿಯನ್ನು ಖರೀದಿಸಿದ್ದು, ಖರೀದಿಸಿದ ಸಸ್ಯ ಸಂರಕ್ಷಣಾ ಔಷಧಿಗೆ ಶೇ.50ರಂತೆ .................ಸಹಾಯಧನವನ್ನು ನೀಡಲು ಈ ಮೂಲಕ ಶಿಫಾರಸ್ಸು ಮಾಡುತ್ತೇನೆ.

**ಸಹಾಯಕ ತೋಟಗಾರಿಕೆ ಅಧಿಕಾರಿ**
**..........................ಹೋಬಳಿ**

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ಸತೋಅ (ಜಿಪಂ)**
**...............................ತಾಲ್ಲೂಕು.**